**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಪಿ.ಸಿ.ಆರ್. ನಂ.7793/2023 ಸಿಡಬ್ಲ್ಯು -1**

| | |
|---|---|
| **ಸಾಕ್ಷಿದಾರರ ಹೆಸರು** | ಆಶಾ. |
| **ಗಂಡನ ಹೆಸರು** | ನವೀನ್, |
| **ವಯಸ್ಸು** | 35 ವರ್ಷ |
| **ಉದ್ಯೋಗ** | ಬ್ಯೂಟಿಶಿಯನ್, |
| **ವಾಸ** | ರಾಜಾಜಿನಗರ, ಬೆಂಗಳೂರು |
| **ಪ್ರಮಾಣೀಕರಿಸಿದ ದಿನಾಂಕ** | 10.04.2026 |

**ದಂ.ಪ್ರ.ಸಂ.ಕಲಂ. 200 ರಡಿಯಲ್ಲಿ ಸಾಕ್ಷಿಗೆ ಪ್ರಮಾಣ ಪೂರ್ವಕ ಹೇಳಿಕೆಃ**

ಫೆಬ್ರವರಿ 2018 ರಲ್ಲಿ ನನಗೆ ಶೋಭಾ ಎನ್ನುವವರು ಭಾಗ್ಯ ಎನ್ನುವವರನ್ನು ಪರಿಚಯ ಮಾಡಿ ಕೊಟ್ಟಿರುತ್ತಾರೆ. ದಿ.15.03.2018 ರಂದು ಭಾಗ್ಯರವರು ಚೀಟಿ ವ್ಯವಹಾರವನ್ನು ಪ್ರಾರಂಭ ಮಾಡಿರುತ್ತಾರೆ. ದಿ.22.10.2019 ಕ್ಕೆ ರೂ.4 ಲಕ್ಷ ರೂಪಾಯಿಗಳ ಚೀಟಿಯನ್ನು ಮುಗಿಸಿರುತ್ತಾರೆ. ನಾನು ಎರಡು ಚೀಟಿಗಳನ್ನು ತಲಾ ರೂ.2 ಲಕ್ಷಗಳಂತೆ ಒಟ್ಟು ರೂ.4ಲಕ್ಷಗಳಿಗೆ ಹಾಕಿರುತ್ತೇನೆ. ನಾನು ಪ್ರತಿ ತಿಂಗಳು ಎರಡು ಚೀಟಿಗಳಿಂದ ತಲಾ ರೂ.10,000/-ಗಳಂತೆ ಒಟ್ಟು ರೂ.20,000/- ಹಣವನ್ನು ಪಾವತಿ ಮಾಡುತ್ತಿದ್ದೆ. ಸದರಿ ಚೀಟಿ ಹಣವನ್ನು ನಗದಾಗಿ ಪಾವತಿ ಮಾಡುತ್ತಿದ್ದೆ. ಚೀಟಿ ಮುಗಿದ ನಂತರ ನಾನು ಭಾಗ್ಯರವರನ್ನು ಚೀಟಿ ಹಣವನ್ನು ವಾಪಸ್ ಕೊಡು ಎಂದು ಕೇಳಿರುತ್ತೇನೆ. ನಂತರ ಭಾಗ್ಯರವರು ಅವರ ಮಗಳಾದ ಲಕ್ಷ್ಮಿ ರವರನ್ನು ಪರಿಚಯ ಮಾಡಿಕೊಟ್ಟಿರುತ್ತಾರೆ. ಪರಿಚಯ ಮಾಡಿ ಕೊಟ್ಟು ನನ್ನ ಮಗಳಾದ ಲಕ್ಷ್ಮಿ ರವರು ಪ್ರಾಪರ್ಟಿ ನ್ನು ತೆಗೆದುಕೊಳ್ಳಬೇಕು ನಿಮ್ಮ 4ಲಕ್ಷ ಹಣವನ್ನು ಉಪಯೋಗಿಸಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ನಾನು ಲಕ್ಷ್ಮಿ ರವರನ್ನು ಭೇಟಿ ಮಾಡಿದಾಗ ನಿಮ್ಮ ರೂ.4ಲಕ್ಷ ಹಣವನ್ನು ನಾನೇ ಉಪಯೋಗಿಸಿಕೊಂಡಿರುತ್ತೇನೆ ಎಂದು ಹೇಳಿರುತ್ತಾರೆ. ನಾನು ಲಕ್ಷ್ಮಿ ರವರನ್ನು ನನ್ನ ಹಣವನ್ನು ವಾಪಸ್ ಕೊಡು ಎಂದು ಕೇಳಿದಾಗ ಅವರು ನನ್ನ ಹಣವನ್ನು ವಾಪಸ್ ಕೊಟ್ಟಿರುವುದಿಲ್ಲ. ಆಗ ನಾನು ಸಂಬಂದಪಟ್ಟ ಪೊಲೀಸ್ ಠಾಣೆಗೆ ಹೋಗಿ

ದೂರನ್ನು ನೀಡಿರುತ್ತೇನೆ. ಪೊಲೀಸರು ಅವರನ್ನು ವಿಚಾರಣೆ ಮಾಡಿದಾಗ ಭಾಗ್ಯ ಮತ್ತು ಲಕ್ಷ್ಮಿ ರವರು ಕಾಲವಕಾಶವನ್ನು ತೆಗೆದುಕೊಂಡಿರುತ್ತಾರೆ. ನಂತರ ಪುನಃ ಭಾಗ್ಯರವರನ್ನು ಹಣ ಕೊಡುವಂತೆ ಕೇಳಿದಾಗ ಭಾಗ್ಯ ರವರು ಕೆಟ್ಟ ಮಾತುಗಳಿಂದ ನನ್ನನ್ನು ಬೈದಿರುತ್ತಾರೆ. ನಂತರ ನಾನು ಗರ್ಭಿಣಿ ಯಾಗಿದ್ದರಿಂದ ಹೆರಿಗೆಗೆ ನಮ್ಮ ಕೇರಳಕ್ಕೆ ಹೋಗಿದ್ದಾಗ ಪೊಲೀಸರು ನನಗೆ ಯಾವುದೇ ಮಾಹಿತಿಯನ್ನು ತಿಳಿಸದೇ ಮತ್ತು ನೋಟಿಸ್ ನ್ನು ಸಹ ಕೊಡದೇ ನ್ಯಾಯಾಲಯಕ್ಕೆ ಬಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ಭಾಗ್ಯ ಮತ್ತು ಲಕ್ಷ್ಮಿ ರವರು ನನ್ನ ಚೀಟಿ ಹಣವನ್ನು ಕೊಡದೇ ನಂಬಿಕೆ ದ್ರೋಹ ಮತ್ತು ಮೋಸ ಮಾಡಿರುತ್ತಾರೆ. ಆದ್ದರಿಂದ, ಆರೋಪಿಯ ವಿರುದ್ದ ಸೂಕ್ತ ಕಾನೂನು ಕ್ರಮ ಜರುಗಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

2. ಸಾಕ್ಷಿಯು ರಾಜಾಜಿನಗರ ಪೊಲೀಸ್ ಠಾಣೆಗೆ ನೀಡಿದ ದೂರಿನ ಪ್ರತಿಯನ್ನು ದಿ.06.06.2022ರ ಸಾರ್ವಜನಿಕ ಮಾಹಿತಿ ಹಕ್ಕಿನ ಅಡಿಯಲ್ಲಿ ಪಡೆದಿದ್ದು ಸದರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಸಿ.1 ಎಂದು, ದಿ.12.01.2023 ರಂದು ರಾಜಾಜಿನಗರ ಪೊಲೀಸ್ ಠಾಣೆಯವರು ನೀಡಿರುವ ಸ್ವೀಕೃತಿಯನ್ನು ನಿಸಿ.2 ಎಂದು, ದಿ.12.01.2023 ರಂದು ರಾಜಾಜಿನಗರ ಪೊಲೀಸ್ ಠಾಣೆಯವರು ನೀಡಿರುವ ಹಿಂಬರಹವನ್ನು ನಿಸಿ.3 ಎಂದು, ಸಾಕ್ಷಿಯು ದಿ.31.01.2023 ರಂದು ಮಾನ್ಯ ಪೊಲೀಸ್ ನಿರ್ದೇಶಕರಿಗೆ ನೀಡಿರುವ ದೂರಿನ ದೃಢೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಸಿ.4 ಎಂದು ಗುರುತಿಸಲಾಯಿತು.

***ಮರುವಿಚಾರಣೆಃ ಇಲ್ಲ.***

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**

Complainant present and examined as CW-1 and documents are marked as Ex.C. 1 to 4.

Sworn statement as CW-1. Closed.

For Hearing. Call on 25.05.2026.

III Addl.C.J.M, Bengaluru.